ದಿನಾಂಕಃ **07.03.2026** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು**.**

ಪಾಟೀ ಸವಾಲುಃ ಶ್ರೀ ಹೆಚ್ ಎನ್ ಎಸ್ ವಕೀಲರಿಂದಃ-

ನಾನು ಈಗ ಚಾಮುಂಡೇಶ್ವರಿ ರೈಲ್ವೆ ಲೇಔಟ್ ಮೈಸೂರಿನಲ್ಲಿ ವಾಸವಾಗಿರುತ್ತೇನೆ ಮೊದಲು ಬೀರೂರಿನಲ್ಲಿ ವಾಸವಾಗಿದ್ದೆ. ಮೈಸೂರಿನಲ್ಲಿರುವುದು ನನ್ನ ಸ್ವಂತ ಮನೆ. ನನ್ನ ಗಂಡ ರೈಲ್ವೆ ಇಲಾಖೆಯಲ್ಲಿ ಕಲಾಸಿ ಕೆಲಸ. ಮೈಸೂರಿನಲ್ಲಿರುವ ನಿವೇಶನವನ್ನು ನನ್ನ ಗಂಡ ರೈಲ್ವೆ ಇಲಾಖೆಯವರು ನೀಡಿರುತ್ತಾರೆ ಎಂದರೆ ಸರಿ. ನಮಗೆ ಎ ಪಿ ಎಲ್ ಪಡಿತರ ಚೀಟಿ ಇರುತ್ತದೆ ಎಂದರೆ ಸರಿ. ಸಾಮಾನ್ಯವಾಗಿ ಪುರಸಭೆಯವರು ಬಿ ಪಿ ಎಲ್ ಕಾರ್ಡ್ ದಾರರಿಗೆ ನಿವೇಶನ ಕೊಡುತ್ತಾರೆ ಎಂದರೆ ಸರಿ, ಸಾಕ್ಷಿ ಆ ಸಮಯದಲ್ಲಿ ನಾವು ಬಡವರಾಗಿದ್ದರಿಂದ ನಮಗೂ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಬೀರೂರಿನಲ್ಲಿ ಯಾವತ್ತೂ ವಾಸವಾಗಿರಲಿಲ್ಲ ಎಂದರೆ ಸರಿಯಲ್ಲ. ನಿಮಗೆ ಮಂಜೂರಾತಿ ಪತ್ರ ಹೇಗೆ ಬಂತು ಎಂಬ ಪ್ರಶ್ನೆಗೆ ಸಾಕ್ಷಿ ಗ್ರಾಮ ಪಂಚಾಯ್ತಿಯವರು ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಮಂಜೂರಾತಿ ಪತ್ರ ನೀಡುವ ಪೂರ್ವದಲ್ಲಿ 1977 ರಲ್ಲಿ ಪುರಸಭೆಯಲ್ಲಿ ನಡಾವಳಿ ಆಗಿರುತ್ತದೆ. ಸದರಿ ನಡಾವಳಿ ಪ್ರತಿ ನನ್ನ ಬಳಿ ಇರುವುದಿಲ್ಲ. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದು ಮಂಜೂರಾತಿ ಪತ್ರ ಅಲ್ಲ ಬದಲಿಗೆ ನೋಟಿಸು ಎಂದರೆ ಸರಿಯಲ್ಲ. 1977 ರಲ್ಲಿ ಆದ ನಡಾವಳಿ ರದ್ದಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಂತರ 2007 ರಲ್ಲಿ ಬೇರೆ ಬೇರೆ ವ್ಯಕ್ತಿಗಳಿಗೆ ನಿವೇಶನ ಹಂಚಿಕೆ ಮಾಡಿರುತ್ತಾರೆ ಎಂದರೆ ಸರಿ. ನನ್ನ ಗಂಡನಿಗೆ ಬೇರೆ ಆಸ್ತಿ ಇದ್ದ ಕಾರಣ 1977 ರಲ್ಲಿ ಆದ ನಡಾವಳಿಯಲ್ಲಿ ನಿವೇಶನದ ಮಂಜೂರಿಯನ್ನು ರದ್ದುಗೊಳಿಸಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಮಂಜೂರಾಗಿರುತ್ತದೆ ಎಂದು ಹೇಳಲಾದ ಆಸ್ತಿಯಲ್ಲಿ ನಾನು ಸ್ವಾದೀನ ಹೊಂದಿರಲಿಲ್ಲ ಎಂದರೆ ಸರಿ.

ಈ ದಾವೆಯನ್ನು ಯಾಕೆ ಹೂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಅಸಸ್ಮೆಂಟ್ ಸಂಖ್ಯೆ 4223. ವಾದಿಗೆ ಎಷ್ಟು ವಿಸ್ತೀರ್ಣದ ಆಸ್ತಿ ಮಂಜೂರಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಚಕ್ಕುಬಂಧಿ ಹೇಳಲಾಗುವುದಿಲ್ಲ. ದಾವಾ ಆಸ್ತಿಯಲ್ಲಿ 2008 ರಿಂದಲೂ ಫೌಂಡೇಶನ್ ಇದೆ ಎಂದರೆ ಸರಿ. ದಾವಾ ಆಸ್ತಿಯು ಮೊದಲಿಗೆ ಯಾರಿಗೆ ಮಂಜೂರಾಗಿತ್ತು ಎಂದು ನನಗೆ ಗೊತ್ತಿಲ್ಲ. ನಿಪಿ-3 ರ ಛಾಯಾಚಿತ್ರದಲ್ಲಿ ಕಂಡುಬರುವ ಅಸ್ತಿ ವಾದಿಯ ಅಸ್ತಿ ಎಂದರೆ ಸರಿ, ಸಾಕ್ಷಿ ಮುಂದುವರೆದು ವಾದಿ ಅದನ್ನು ಇತ್ತೀಚೆಗೆ ಮಾಡಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ-4 ರಿಂದ 6 ರ ಛಯಾಚಿತ್ರದಲ್ಲಿ ಕಂಡುಬರುವ ತಂತಿಬೇಲಿಯನ್ನು ನಾನೇ ಹಾಕಿರುತ್ತೇನೆ. ಈ ದಾವೆ ಹೂಕುವ ಪೂರ್ವದಲ್ಲಿ ತಂತಿಕಂಬ ಹಾಕಿಸಿರುತ್ತೇನೆ ಎಂದರೆ ಸರಿ. ತಂತಿ ಕಂಬ ಹಾಕಿರುವ ಆಸ್ತಿ ಮೊದಲಿಗೆ 1980 ರಲ್ಲಿ ನಾರಾಯಣಸ್ವಾಮಿ ರವರಿಗೆ ಮಂಜೂರಾದ ಆಸ್ತಿ ಎಂದರೆ ನನಗೆ ಗೊತ್ತಿಲ್ಲ. ನಾರಾಯಣಸ್ವಾಮಿ ರವರು ಸದರಿ ಅಸ್ತಿಯನ್ನು ಪಾಪಣ್ಣ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಪಾಪಣ್ಣ ರವರಿಗೆ ಮಾರಾಟ ಮಾಡುವ

ಸಮಯದಲ್ಲಿ ಫೌಂಡೇಶನ್ ಇತ್ತು. ಪಾಪಣ್ಣ ರವರು ಸದರಿ ಆಸ್ತಿಯನ್ನು ಅನುಸೂಯಮ್ಮ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆ ಸಮಯದಲ್ಲೂ ಫೌಂಡೇಶನ್ ಇತ್ತು ಎಂದರೆ ಸರಿ. ಅನುಸೂಯಮ್ಮ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನ್ನ ನಿವೇಶನ ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಾರಾಯಣಸ್ವಾಮಿ ರವರು ಪಾಪಣ್ಣ ರವರಿಗೆ, ಪಾಪಣ್ಣ ರವರು ಅನುಸೂಯಮ್ಮ ರವರಿಗೆ ಆಸ್ತಿಯನ್ನು ಮಾರಾಟ ಮಾಡಿದಾಗ ನಾನು ಅವರಿಗೆ ತೊಂದರೆ ಮಾಡಿಲ್ಲ ಎಂದರೆ ಆ ವಿಚಾರ ನನಗೆ ಗೊತ್ತಿರಲಿಲ್ಲ ಎಂದು ನುಡಿಯುತ್ತಾರೆ. ವಾದಿಯು ದಾವಾ ಆಸ್ತಿಯನ್ನು ಖರೀದಿಸಿದ ನಂತರ ನೀವು ಅವರಿಗೆ ತೊಂದರೆ ನೀಡುತ್ತಿದ್ದೀರಿ ಎಂದರೆ ಸಾಕ್ಷಿಯು ನಾನು ಕಂದಾಯ ಕಟ್ಟಲು ಹೋದಾಗ ಸಂಬಂಧಪಟ್ಟ ಅಧಿಕಾರಿ ನಿಮ್ಮ ನಿವೇಶನ ಇಲ್ಲಾ ಎಂದು ಹೇಳಿರುತ್ತಾರೆ. ವಾದಿಯು ಅನುಸೂಯಮ್ಮ ರವರಿಂದ ಕ್ರಯಪತ್ರದಂತೆ ಖರೀದಿಸಿದ ಆಸ್ತಿ ಸರಿ ಇದೆ ಎಂದರೆ ಸರಿಯಲ್ಲ. ನನಗೆ ಮಂಜೂರಾದ ಸಮಯದಲ್ಲಿ ಅಳತೆ ಮಾಡಿಲ್ಲ ಎಂದರೆ ಸರಿಯಲ್ಲ. ಮಂಜೂರಾಗುವ ಸಮಯದಲ್ಲಿ ಮಾಡಿರುವ ನಕಾಶೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ವಾದಿಗೆ ಕ್ರಯಪತ್ರದಂತೆ ಖಾತೆ ಬದಲಾವಣೆ ಮಾಡದಂತೆ ನಾನು ತಕರಾರು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ನನಗೆ ಮಂಜೂರಾಗಿದೆ ಎಂದು ಹೇಳಲಾದ ನಿವೇಶನಕ್ಕೆ ರಸ್ತೆ ಇಲ್ಲಾ ಎಂದರೆ ಸರಿಯಲ್ಲ. ವಾದಿಗೆ ತೊಂದರೆ ನೀಡುವ ಉದ್ದೇಶದಿಂದ ಅವರ ಆಸ್ತಿಗೆ ಅಡ್ಡಲಾಗಿ ತಂತಿಕಂಬ ಹಾಕಿರುತ್ತೇನೆ ಎಂದರೆ ಸರಿಯಲ್ಲ. ನಾನು ತಂತಿ ಕಂಬ ಹಾಕಿರುವ ಆಸ್ತಿ ವಾದಿಯ ಆಸ್ತಿ ಎಂದರೆ ಸರಿಯಲ್ಲ. ವಾದಿಯ ಆಸ್ತಿಯ ಚಕ್ಕುಬಂಧಿಯಲ್ಲಿ ನನ್ನ ಆಸ್ತಿ ಇಲ್ಲದೇ ಇದ್ದರೂ ವಾದಿಗೆ ತೊಂದರೆ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಆಸ್ತಿಯ ಚಕ್ಕುಬಂಧಿ ವಾದಿಯ ಆಸ್ತಿಯ ಚಕ್ಕುಬಂಧಿಯಲ್ಲಿ ಎಲ್ಲೂ ಬರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಚಕ್ಕುಬಂಧಿಯನ್ನು ನನಗೆ ಹೇಳಲಾಗುವುದಿಲ್ಲ. ನನ್ನ ಆಸ್ತಿಯ ಚಕ್ಕುಬಂಧಿ ಪೂರ್ವಕ್ಕೆ ಃ ರೈಲ್ವೆ ಸ್ವತ್ತು, ಪಶ್ಚಿಮಕ್ಕೆ ಃ ಹಿರಿಯಂಗಳ ರಸ್ತೆ, ಉತ್ತರಕ್ಕೆ ಃ ಉಮ್ಲಾನಾಯ್ಕ ರವರ ಮನೆ, ದಕ್ಷಿಣಕ್ಕೆ ಃ ಲಕ್ಷ್ಮಮ್ಮ ರವರ ಮನೆ. ಅವರು ತಮಿಳು ಜನಾಂದವರು ಎಂದರೆ ನನಗೆ ಗೊತ್ತಿಲ್ಲ. ನಾನು ಈಗ ಹೇಳಿದ ಚಕ್ಕುಬಂಧಿ ದಾವಾ ಆಸ್ತಿಯ ಚಕ್ಕುಬಂಧಿ ಎಂದರೆ ಸರಿಯಲ್ಲ. ನಾನು ಈಗ ಹೇಳಿರುವ ಚಕ್ಕುಬಂಧಿ ನಿಪಿ-1 ರ ಕ್ರಯಪತ್ರದಲ್ಲಿ ಇದೆ ಎಂದರೆ ಸರಿ. ನಾನು ಹೇಳಿರುವ ಈ ಚಕ್ಕುಬಂಧಿಯು ನಿಪಿ-20 ರ ಪತ್ರದಲ್ಲಿದೆ ಎಂದರೆ ಸರಿ. ನಾನು ಹೇಳಿರುವ ಚಕ್ಕುಬಂಧಿ ನಿಪಿ-21 ಮತ್ತು 22 ರಲ್ಲೂ ಇದೆ ಎಂದರೆ ಸರಿ. ನಾನು ನನ್ನ ಆಸ್ತಿಯ ಚಕ್ಕುಬಂಧಿ ತೋರಿಸುವ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಹೇಳುವ ಆಸ್ತಿ ಬೀರೂರು ಪಟ್ಟಣದಲ್ಲಿ ಅಸ್ತಿತ್ವದಲ್ಲಿಲ್ಲ ಎಂದರೆ ಸರಿಯಲ್ಲ. ವಾದಿಗೆ ತೊಂದರೆ ನೀಡುವ ಉದ್ದೇಶದಿಂದ ದಾವಾ ಆಸ್ತಿಯ ಮಧ್ಯಭಾಗದಲ್ಲಿ ಕಂಬ ನೆಟ್ಟಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ವಾದಿಯೇ ಮಾಲೀಕರು ಎಂದರೆ ಸರಿಯಲ್ಲ.

ಈ ಪ್ರಕರಣದ ಸಲುವಾಗಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ**.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ

Sd/-
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.